**ಓ.ಎಸ್. ನಂಃ 592/2022**

**ಪಿ.ಡಬ್ಲ್ಯೂಃ 1**

**ದಿನಾಂಕ 10.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಲ್.ವಿ.ಆರ್. ವಕೀಲರಿಂದಃ**

7. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಸದರಿ ಪೋಟೋ ದಾವಾ ಆಸ್ತಿಯ ಪೋಟೋ ಎಂದು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಕಾಣುತ್ತಿರುವ ಹಂಚಿನ ಮನೆಯು ದಾವಾ ಆಸ್ತಿಯಲ್ಲಿಯೇ ಇದೆ ಹಾಗೂ ಸದರಿ ಮನೆಯು ನಮಗೆ ಸೇರಿರುತ್ತದೆ. ದಾವಾ ಆಸ್ತಿಯಲ್ಲಿರುವ ನಿಡಿ.1 ರ ಮನೆಯನ್ನು ಕಟ್ಟುವ ಪೂರ್ವದಲ್ಲಿ ನಾವು ದಾವಾ ಆಸ್ತಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ–ಪರಿವರ್ತನೆ ಮಾಡಿಸಿರುವುದಿಲ್ಲ.

8. ನಿಪಿ.1 ರಲ್ಲಿರುವ ಆಸ್ತಿಯು ಯಾವ ಸರ್ವೇ ನಂಬರಿನಲ್ಲಿ ಇರುತ್ತದೆ ಎಂದು ತಿಳಿಯಲು ನಾವು ಸರ್ವೇಯನ್ನು ಮಾಡಿಸಿರುತ್ತೇವೆ. ಆ ರೀತಿ ಸರ್ವೇಯನ್ನು ನಾವು 2018-19 ನೇ ಸಾಲಿನಲ್ಲಿ ಮಾಡಿಸಿರುತ್ತೇವೆ. ಸದರಿ ಸರ್ವೇಗೆ ಸಂಬಂಧಿಸಿದ ದಾಖಲೆಗಳು ನನ್ನ ವಕೀಲರ ಬಳಿ ಇದೆ. ಸಾಕ್ಷಿಗೆ ಈಗ ಒಂದು ಋಣಭಾರ ಪ್ರಮಾಣ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ.2 ಎಂದು ಗುರುತಿಸಲಾಯಿತು.

9. 1970 ರ ಪೂರ್ವದಲ್ಲಿ ದಾವಾ ಆಸ್ತಿಯ ಸಂಬಂಧ ನಡೆದ ವ್ಯವಹಾರಗಳ ಋಣಭಾರ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಮೂಲ ಸರ್ವೇ ನಂಬರ್ 96 ಎಂದರೆ ಸರಿ. ದಿನಾಂಕ 08.04.1942 ರಂದು ದಾವಾ ಆಸ್ತಿಯನ್ನು ನಾಗಾಚಾರ್ ಅಮ್ಮಾನಮ್ಮ ರವರು ನಂಜಮ್ಮರವರಿಗೆ ಮಾರಾಟ ಮಾಡಿದ ಕ್ರಯ ಪತ್ರದ ಬಗ್ಗೆ ನಿಡಿ.2 ರಲ್ಲಿ ನಮೂದು ಇದೆ ಎಂದರೆ ಸರಿ. ನಿಡಿ.2 ರಲ್ಲಿ ಹೆಸರಿಸಿರುವ ಸದರಿ ನಂಜಮ್ಮರವರು ಈ ದಾವೆಯ 1 ನೇ ಪ್ರತಿವಾದಿಯ ಅತ್ತೆ ಎಂದರೆ ಸರಿ. ನಿಡಿ.2 ರಲ್ಲಿ ಹೆಸರಿಸಿರುವ ಸದರಿ ನಂಜಮ್ಮರವರ ಗಂಡನ ಹೆಸರು ವಿಷಕಂಠೇಗೌಡ ಎಂದರೆ ಸರಿ.

10. ಸಾಕ್ಷಿಗೆ ಈಗ ಒಂದು ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಿ, ಸದರಿ ಕ್ರಯಪತ್ರದಡಿಯಲ್ಲಿ ದಾವಾ ಆಸ್ತಿಯನ್ನು ನಾಗಾಚಾರ್ ಅಮ್ಮಾನಮ್ಮ ರವರು ನಂಜಮ್ಮರವರಿಗೆ ಮಾರಾಟ ಮಾಡಿದ ಕ್ರಯ ಪತ್ರ ಎಂದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸಿದ್ದು, ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ರ ಕ್ರಯ ಪತ್ರದಡಿಯಲ್ಲಿ ನಂಜಮ್ಮರವರು ಸರ್ವೇ ನಂಬರ್ 96 ರಲ್ಲಿ 33 ಗುಂಟೆ ಜಮೀನು ಖರೀದಿಸಿರುತ್ತಾರೆ ಎಂದರೆ ಸರಿ. ನಿಡಿ.3 ರ ಕ್ರಯಪತ್ರದಡಿಯಲ್ಲಿ ನಮೂದಿಸಿರುವ ಸರ್ವೇ ನಂಬರ್ 96 ರ 33 ಗುಂಟೆ ಜಮೀನಿನ ಚೆಕ್ಕುಬಂಧಿಯನ್ನು ಸಾಕ್ಷಿಗೆ ಓದಿ ಹೇಳಿದ್ದು, ಸದರಿ ಚೆಕ್ಕುಬಂಧಿಗಳ ಸರಿ ಇರುತ್ತವೆ ಎಂದು ಸಾಕ್ಷಿಯು ಒಪ್ಪಿರುತ್ತಾರೆ.

11. ಸಾಕ್ಷಿಗೆ ಈಗ ಒಂದು ಬೋಗ್ಯ ಪತ್ರದ ದೃಢೀಕೃತ ನಕಲನ್ನು ತೋರಿಸಿ, ಸದರಿ ಬೋಗ್ಯ ಪತ್ರದಡಿಯಲ್ಲಿ ದಾವಾ ಆಸ್ತಿಯನ್ನು ನಂಜಮ್ಮರವರು ರಂಗೇಗೌಡರಿಗೆ ಬೋಗ್ಯ ಮಾಡಿರುತ್ತಾರೆ ಎಂದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸಿದ್ದು, ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಬೋಗ್ಯವನ್ನು ನಂತರದಲ್ಲಿ ಬಿಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

12. ನಿಡಿ.3 ರಡಿಯಲ್ಲಿ ಖರೀದಿಸಿದ್ದ ದಾವಾ ಆಸ್ತಿಯನ್ನು ಬೇರೆ ಯಾವುದೇ ಅನ್ಯ ವ್ಯಕ್ತಿಗಳಿಗೆ ಪರಭಾರೆ ಅಥವಾ ವಿಲೆ ಮಾಡದೇ ಸದರಿ ನಂಜಮ್ಮರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಂಜಮ್ಮರವರ ಮರಣದ ನಂತರ ದಾವಾ ಆಸ್ತಿಯು ಅವರ ಮಗನಾದ ಶಿವನಂಜೇಗೌಡರಿಗೆ ಹೋಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ನಂಜಮ್ಮರವರಿಗೆ ಶಿವನಂಜೇಗೌಡರನ್ನು ಹೊರತುಪಡಿಸಿ ಶಿವನಂಜಮ್ಮ, ರಾಜಮ್ಮ ಮತ್ತು ಗೌರಮ್ಮ ಎನ್ನುವ ಇನ್ನೂ 3 ಜನ ಹೆಣ್ಣು ಮಕ್ಕಳು ಇದ್ದರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

13. 3 ನೇ ಪ್ರತಿವಾದಿಯ ತಂದೆಯ ಹೆಸರು ಬೋರೇಗೌಡ ಮತ್ತು ತಾಯಿಯ ಹೆಸರು ಲಕ್ಷ್ಮೀದೇವಮ್ಮ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿಯ ತಾತನ ಹೆಸರು ಪಾಪೇಗೌಡ ಮತ್ತು ಅಜ್ಜಿಯ ಹೆಸರು ರಾಜಮ್ಮ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿ ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಮೂಲ ಮಾಲೀಕರಾಗಿದ್ದ ನಂಜಮ್ಮರವರ 3 ಜನ

ಹೆಣ್ಣು ಮಕ್ಕಳಿಗೂ ಸಹ ದಾವಾ ಆಸ್ತಿಯಲ್ಲಿ ಸಮಾನ ಪಾಲು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಂಜಮ್ಮರವರಿಗೆ ಹೆಣ್ಣು ಮಕ್ಕಳು ಇದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

14. ವಾದ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂಧಿಗಳು ಸರ್ವೇ ನಂಬರ್ 96/3 ಎ ರ ಜಮೀನಿಗೆ ಸಂಬಂಧಪಟ್ಟ ಚೆಕ್ಕುಬಂಧಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಶಿವನಂಜೇಗೌಡ ಬಿನ್ ವಿಷಕಂಠರವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಆಗಿರುತ್ತದೆ. ಪ್ರತಿವಾದಿಯರು ಸರ್ವೇ ನಂಬರ್ 96/3 ಬಿ ರ 17 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದಾರೆ. ನಿಪಿ.6 ರ ಪ್ರಕಾರ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯರು ತಮ್ಮ ಹೆಸರಿಗೆ ದಾವಾ ಆಸ್ತಿಯ ಪಹಣಿಯನ್ನು ಪೌತಿ ಖಾತೆ ಮಾಡಿಸಿಕೊಂಡರು ಸಹ ನಾವೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇವೆ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವಾ ಆಸ್ತಿಯ ಪಹಣಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**